**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 18

**CW**. 24

**ಸಾಕ್ಷಿಯ ಹೆಸರು – ವಿದ್ಯಾಶ್ರೀ ಸಿ**

**ಗಂಡನ ಹೆಸರು – ವಿಜಯ ಕುಮಾರ**

**ವಯಸ್ಸು – 32 ವರ್ಷಗಳು**

ದಿನಾಂಕ **29.08.2025** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಡಬ್ಲ್ಯೂ ಪಿ ಸಿ ,ಡಿ ಸಿ ಆರ್ ಬಿ ಮೈಸೂರು**

**ವಾಸಸ್ಥಳ – ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2016 ರಿಂದ ಜುಲೈ 2023 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪಿ ಸಿ ಯಾಗಿ ಸೇವೆ ಸಲ್ಲಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 03–03–2020 ರಂದು ಬೆಳಗ್ಗೆ 10.00 ಗಂಟೆಗೆ ಚಾಸಾ–29 ರವರಿಂದ ಪ್ರ ವ ವ ಯನ್ನು ಪಡೆದು ಅದೇ ದಿನ ಸುಮಾರು 10.45 ಗಂಟೆಗೆ ನ್ಯಾಯಾಲಯಕ್ಕೆ ನೀಡಿದ್ದೇನೆ. ಸದರಿ ಪ್ರ ವ ವ ಯನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ–31 ಎಂದು ಗುರುತಿಸಲಾಯಿತು.

ದಿಃ 04–03–2020 ರಂದು ಈ ಪ್ರಕರಣದ ಆರೋಪಿ ಪತ್ತೆಗಾಗಿ ಚಾಸಾ–29 ರವರ ಜೊತೆ ಹೋಗಿದ್ದು , ಬೆಟ್ಟದಪುರ ಗ್ರಾಮದ ದೇವರಾಜು ಎನ್ನುವವರ ಮನೆಯಲ್ಲಿ ಆರೋಪಿ ಇದ್ದಾಳೆ ಎಂದು ಗೊತ್ತಾಗಿ , ಅಲ್ಲಿಗೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ನಾನು ಮತ್ತು ಚಾಸಾ–29 ರವರು ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ.

**SC No.227/2022**
**PW. 18**

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಆರೋಪಿ ಪತ್ತೆಗಾಗಿ ಹೋಗುವಾಗ ಆಕೆಯ ಫೋಟೋ ಮತ್ತು ಚಹರೆ ಪಡೆದಿರಲಿಲ್ಲ ಎಂದರೆ ಸರಿ . ಆರೋಪಿಯನ್ನು ಅವರ ಮನೆಯಿಂದ ಕರೆದುಕೊಂಡು ಬಂದಿದ್ದೇವೆ ಎಂದರೆ ಸರಿ. ಆರೋಪಿ ಪತ್ತೆಗಾಗಿ ಯಾವುದೇ ಕ್ರಮ ಕೈಗೊಂಡಿಲ್ಲದಿದ್ದರೂ ಕೂಡ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.